ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಈ ಕಾಲೇಜು ಮಂಜೂರಾತಿಗಾಗಿ ಈ ಸಂಸ್ಥೆಗಳ ಕೋರಿಕೆಯ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ಶಿಫಾರಸ್ಸು ಪಡದಿ ಬಂದಿರುವುದಿಲ್ಲ.

ಕಲಘಟಗಿ ಮತ್ತು ಶಿಗ್ಗಾಂವ್‌ನಲ್ಲಿ ಮುನಿಸಿಪಲ್ ಕೋರ್ಟ್ ಪ್ರಾರಂಭಿಸುವ ವಿಚಾರದ ಬಗ್ಗೆ

2863 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಕಲಘಟಗಿ ಮತ್ತು ಶಿಗ್ಗಾಂವ್‌ನಲ್ಲಿ ಮುನ್ಸಿಫ್ ಕೋರ್ಟ್ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಈ ಮೇಲ್ಕಂಡ ಎರಡು ಸ್ಥಳಗಳಲ್ಲಿ ಯಾವಾಗ ಮುನ್ಸಿಫ್ ನ್ಯಾಯಾಲಯವನ್ನು ಪ್ರಾರಂಭಿಸಲಾಗುವುದು?

ಇ) ಈ ಮುನ್ಸಿಫ್ ನ್ಯಾಯಾಲಯಗಳ ನಿರ್ಮಾಣಕ್ಕಾಗಿ ಸ್ಥಳಾವಕಾಶವನ್ನು ಒದಗಿಸಿದ್ದರೂ ಇದುವರೆಗೂ ನಿರ್ಮಾಣ ಕಾರ್ಯ ಪ್ರಾರಂಭವಾಗದಿರಲು ಕಾರಣಗಳೇನು?

ಈ) ಸರ್ಕಾರ ಎಷ್ಟು ಬೇಗ ಇದರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವುದೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೌದು.

ಆ) ದೊರೆಯುವ ರಾಜ್ಯದ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಅದ್ಯತೆಯ ಮೇರೆಗೆ ಎಲ್ಲೆಲ್ಲಿ ಅತ್ಯವಶ್ಯಕವಾಗಿ ನ್ಯಾಯಾಲಯಗಳನ್ನು ಸ್ಥಾಪಿಸಬೇಕೋ ಅಂತಹ ಸ್ಥಳಗಳಿಗೆ ನ್ಯಾಯಾಲಯಗಳನ್ನು ಮಂಜೂರು ಮಾಡಲಾಗುವುದು.

ಇ) ಮತ್ತು ಈ) ನ್ಯಾಯಾಲಯಗಳನ್ನು ಮಂಜೂರು ಮಾಡಿದ ನಂತರ, ದೊರೆಯುವ ರಾಜ್ಯದ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ನಿವೇಶಗಳನ್ನು ಸ್ವಾಧೀನ ಮಾಡಿಕೊಂಡ ನಂತರ ನ್ಯಾಯಾಲಯಗಳ ಕಟ್ಟಡ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು. ಕಲಘಟಗಿ ಮತ್ತು ಶಿಗ್ಗಾಂವ್‌ಗಳಲ್ಲಿ ಸ್ಥಳಾವಕಾಶ ದೊರೆತಿರುವುದರಿಂದ ಅದ್ಯಾತೆಯ ಮೇರೆಗೆ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಧಾರವಾಡ ಜಿಲ್ಲಾಪರಿಷತ್ತಿನ ಶಾಲೆಗಳ ಬಗ್ಗೆ

2862 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್ತಿನವರು ಮಂಜೂರು ಮಾಡಿದ್ದ ಅನುದಾನ ರಹಿತ ಶಾಲೆಗಳ ಸಂಖ್ಯೆ ಎಷ್ಟು?

ಆ) ಈ ಅನುದಾನ ರಹಿತ ಶಾಲೆಗಳನ್ನು ಅನುದಾನ ಸಹಿತವೆಂದು ಪರಿಗಣಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯ ಅನುಮತಿ ಇಲ್ಲದೆ ಪ್ರಾರಂಭಿಸಿರುವ ಶಾಲೆಗಳು ಯಾವುವು?

ಈ) ಹಾಗಿದ್ದಲ್ಲಿ ಸರ್ಕಾರ ಈ ಶಾಲೆಗಳ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) 85.

ಆ) ಇಲ್ಲ.

ಇ) 5. (ಐದು).

1) ಡಾ. ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆ ಶಿಗ್ಗಾಂವ್ 2) ವಿಜಯ ವಿಠಲ ಪ್ರೌಢಶಾಲೆ, ಸವಣೂರು

3) ಬೀರೇಶ್ವರ ವಿದ್ಯಾ ಸಂಸ್ಥೆ, ಹಿರೇಬದರಿ, ರಾಣೆಬೆನ್ನೂರು.

4) ಸಿದ್ದಾಪುರ ಪ್ರೌಢ ಶಾಲೆ, ಸಿದ್ದಾಪುರು.

5) ಗಾಂಧೀ ಗ್ರಾಮೀಣ ಗುರುಕುಲ, ರಾಮಪುರ.

ಈ) ಈ ರೀತಿಯ ಶಾಲೆಗಳು ರಾಜ್ಯದಾದ್ಯಂತ ನಡೆಯುತ್ತಿವೆ. ಇವುಗಳ ವಿರುದ್ಧ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಜಿ.ವಿ.ಕೆ. ರಾವ್ ವರದಿ ಕುರಿತು

2699 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಜಿ.ವಿ.ಕೆ. ರಾವ್ ಸಮಿತಿಯ ವರದಿಯನ್ನು ಸರ್ಕಾರ ಅಂಗೀಕರಿಸಿದೆಯೆ?

ಆ) ಅಂಗೀಕರಿಸಿದ್ದರೆ ಈ ವರದಿಯಲ್ಲಿ ಅಕ್ರಮವೆಸಗಿದ್ದಾರೆಂದು ಹೇಳಲಾದ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೆ?

ಇ) ಒಂದು ವೇಳೆ ಶ್ರೀ ಜಿ.ವಿ.ಕೆ. ರಾವ್ ಸಮಿತಿಯ ವರದಿಯನ್ನು ಅಂಗೀಕರಿಸದಿದ್ದರೆ ಕಾರಣವೇನು?

ಈ) ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಗಟು ಜಮೀನು ನೀಡುವಲ್ಲಿ ನಿರ್ಣಯ ಕೈಗೊಳ್ಳಲು ಸಚಿವರೊಬ್ಬರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುವುದು ನಿಜವೆ?

ಉ) ಹಾಗಿದ್ದಲ್ಲಿ ಸರ್ಕಾರ ಈ ರೀತಿಯ ಸಮಿತಿಯನ್ನು ರಚಿಸಿದ್ದರೆ ಶ್ರೀ ಜಿ.ವಿ.ಕೆ. ರಾವ್ ಸಮಿತಿ ವರದಿಯ ಗತಿ ಏನಾಯಿತು?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) 1) ಸದರಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಿಚಾರಣಾ ವರದಿಯಲ್ಲಿನ ಸಾರಾಂಶವನ್ನು ಹಾಗೂ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 68 ರಡಿಯಲ್ಲಿ ನೋಟಿಸ್‌ಗಳನ್ನು ಕೊಡಲಾಗಿದೆ.